**ಕರ್ನಾಟಕ ವಿಧಾನ ಪರಿಷತ್ತು**

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ** : 1179

**ಮಾನ್ಯ ಸದಸ್ಯರ ಹೆಸರು** : ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

**ಉತ್ತರಿಸಬೇಕಾದ ದಿನಾಂಕ** : 07-03-2022

**ಉತ್ತರಿಸುವ ಸಚಿವರು** : ಪ್ರವಾಸೋದ್ಯಮ, ಜೀವಿಶಾಸ್ತ್ರ, ಮತ್ತು ಪರಿಸರ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸರ್ಕಾರದಿಂದ ಗುರುತಿಸಲಾದ ಪ್ರವಾಸಿ ತಾಣಗಳು ಯಾವುವು; ಇವುಗಳ ಕುರಿತು ಅಂತರ್ಜಾಲದಲ್ಲಿ ಮಾಹಿತಿಯನ್ನು ಅಳವಡಿಸಲು ಸರ್ಕಾರದ ಕ್ರಮವೇನು; | ಪ್ರವಾಸೋದ್ಯಮ ಇಲಾಖೆಯಿಂದ ಉಡುಪಿ ಜಿಲ್ಲೆಯಲ್ಲಿ 48 ಸ್ಥಳಗಳನ್ನು ಹಾಗೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 35 ಸ್ಥಳಗಳನ್ನು ಒಟ್ಟು 83 ಸ್ಥಳಗಳನ್ನು ಪ್ರವಾಸಿ ತಾಣಗಳಾಗಿ ಗುರುತಿಸಲಾಗಿದ್ದು, ಸದರಿ ಪ್ರವಾಸಿ ತಾಣಗಳ ವಿವರ ಕೆಳಗಿನಂತಿದೆ:- |

**1. ಉಡುಪಿ ಜಿಲ್ಲೆ**

| ತಾಲ್ಲೂಕು | ಪ್ರವಾಸಿ ತಾಣಗಳ ವಿವರ |
|---|---|
| ಉಡುಪಿ | ಉಡುಪಿ, ಮಲ್ಪೆ ಸೆಂಟ್ ಮೇರಿಸ್ ಐಲ್ಯಾಂಡ್, ಕಾಪು, ಕೂಡ್ಲುತೀರ್ಥ, ಹಸ್ತಶಿಲ್ಪ ಮತ್ತು ಮಣ್ಣಪಳ್ಳಕೆರೆ, ಹೌಸ್ ಬೋಟ್ ಕೋಡಿಬೇಂಗ್ರೆ, ಪಡುಕೆರೆ ಬೀಚ್, ಮಲ್ಪೆ ಬಂದರು, ನಾಣ್ಯ ಮ್ಯೂಸಿಯಂ, ಸಾಲುಮರದ ತಿಮ್ಮಕ್ಕ ಟ್ರೀ ಪಾರ್ಕ್, ಅರ್ಬಿಫಾಲ್ಸ್-ಮಣಿಪಾಲ |
| ಕಾರ್ಕಳ | ಸೋಮೇಶ್ವರ ಬೀಚ್, ಗೊಮ್ಮಟೇಶ್ವರ ಬೆಟ್ಟ, ಕೋಟಿ ಚೆನ್ನಯ್ಯ ಥೀಂಪಾರ್ಕ್, ಚತುರ್ಮುಖ ಬಸದಿ, ಆನೆಕೆರೆ |
| ಕುಂದಾಪುರ | ಮರವಂತೆ, ಕೊಲ್ಲೂರು, ಆನೆಜರಿಕೋಡಿ ಬೀಚ್, ಬಬ್ಬುಕುದ್ರು (ಪಂಚಗಂಗೊಳ್ಳಿ), ಮಲ್ಯಾಡಿ ಪಕ್ಷಿಧಾಮ, ಉಪ್ಪಿನಕುದ್ರು ದ್ವೀಪ, ಗಂಗೊಳ್ಳಲಿ ಬೀಚ್, ಹೌಸ್ ಬೋಟ್ ಸೌಪರ್ಣಿಕಾ ನದಿ. |
| ಬ್ರಹ್ಮಾವರ | ಬಾರ್ಕುರು ಕೋಟೆ, ಕತ್ತಲೆ ಬಸದಿ, ಡಿವೈನ್ ಪಾರ್ಕ್, ಸೂರಾಲು ಅರಮನೆ, ಬಾಳಕುದ್ರು (ಉಪ್ಪಿನಕೋಟೆ) ದ್ವೀಪ, ಕೋಟಾ ಶಿವರಾಮಕಾರಂತ್ ಥೀಮ್ ಪಾರ್ಕ್ |
| ಕಾಪು | ಕಾಪುಬೀಚ್-ಲೈಟ್ ಹೌಸ್ / ಸ್ಕೂಬಾ ಡೈವಿಂಗ್, ಪಡುಬಿದ್ರೆ ಎಂಡ್ ಪಾಯಿಂಟ್ (ಬಿಎಫ್‌ಸಿ ಬೀಚ್) |
| ಬೈಂದೂರು | ಮರವಂತೆ ಬೀಚ್, ಒತ್ತಿನಾಣೆ-ಪಡುವರಿ ಸೋಮೇಶ್ವರ ಬೀಚ್, ಮೂಕಾಂಬಿಕಾ ವನ್ಯಜೀವಿ ಅಭಯಾರಣ್ಯ, ಕೊಡಚಾದ್ರಿ ಬೆಟ್ಟ, ಕೂಸಳ್ಳಿ ಫಾಲ್ಸ್, ಕಿರುಮಂಜೇಶ್ವರ ಬೀಚ್, ಮೂಡಗಲ್ಲು ಪಾದೆ, ಶಿರೂರ ಬೀಚ್, ಬೆಳಕಲ ತೀರ್ಥ ಫಾಲ್ಸ್ |
| ಹೆಬ್ರೀ | ಕೂಡ್ಲು ತೀರ್ಥ, ಜೋಮ್ಲು ತೀರ್ಥ ಸೀತಾ ನದಿ ಪ್ರಕೃತಿ ಕೇಂದ್ರ, ಬಕ್ರೇಮಠ-ಮುದ್ರಾಡಿ, ಮುದ್ರಾಡಿ ಗರಡಿ |

**2. ದಕ್ಷಿಣ ಕನ್ನಡ ಜಿಲ್ಲೆ**

| ತಾಲ್ಲೂಕು | ಪ್ರವಾಸಿ ತಾಣಗಳ ವಿವರ |
|---|---|
| ಮಂಗಳೂರು | ಸೂರತ್ಕಲ್, ಪಣಂಬೂರು, ಉಲ್ಲಾಳ, ಸೋಮೇಶ್ವರ, ಕಟೀಲು, ಮೂಡಬಿದರೆ, ತಣ್ಣೀರುಬಾವಿ, ಪಿಲಿಕುಳ ನಿಸರ್ಗಧಾಮ, ಸಸಿಹಿತ್ಲು ಬೀಚ್, ತಲಪಾಡಿ ಬೀಚ್, ನೆಲ್ಲಿತೀರ್ಥ ಗುಹಾಲಯ, ಗುರುಪುರ ನದಿ, ನೇತ್ರಾವತಿ ನದಿ, ಶ್ರೀಮಂತಿ ಬಾಯಿ ಸರ್ಕಾರಿ ಸಂಗ್ರಹಾಲಯ, ಸುಲ್ತಾನ್ ಭತ್ತೇರಿ ವಾಚ್ ಟವರ್, ಅಂಚೆ ಚೀಟಿಗಳ ಸಂಗ್ರಹ ಕೇಂದ್ರ-ಪಾಂಡೇಶ್ವರ |
| ಬೆಳ್ತಂಗಡಿ | ಧರ್ಮಸ್ಥಳ, ವೇಣೂರು, ಜಮಲಾಬಾದ್ ಕೋಟೆ (ನರಸಿಂಹಗಡ), ಎರ್ಮಾಯಿ ಜಲಪಾತ, ದಿಡುಪೆ ಜಲಪಾತ, ಕಡಮಗುಂಡಿ ಜಲಪಾತ, ಪಶ್ಚಿಮಘಟ್ಟ |
| ಸುಳ್ಯ | ತೋಡಿನಕಾನ ಜಲಪಾತ-ಮತ್ಸ್ಯಧಾಮ, ಎಣ್ಮೂರು-ಬಂಟಮಲೆ ಮತ್ತು ಪೂಮಲೆ |

<table>
<tr>
<td></td>
<td></td>
<td>
<table>
<tr><td>ಪುತ್ತೂರು</td><td>ಬೇಂದ್ರೆತೀರ್ಥ, ಉಪ್ಪಿನಂಗಡಿ, ಶಿರಡಿ, ಬಿರುಮಲೆಬೆಟ್ಟ, ಪಡುಮಲೆ ಬೆಟ್ಟ, ಶಿವರಾಂ ಕಾರಂತ ಬಾಲವನ</td></tr>
<tr><td>ಬಂಟ್ವಾಳ</td><td>ಅನಂತವಾಡಿಯ ಪಾಂಡವರ ಗುಹೆ</td></tr>
<tr><td>ಮೂಡಬಿದರೆ</td><td>ಕೊಡಿಯಡ್ಕ, ಸಮ್ಮಿಲನ ಬಟರ್ ಫ್ಲೈ ಪಾರ್ಕ್-ಬೆಳುವಾಯಿ</td></tr>
</table>
ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಪ್ರವಾಸೋದ್ಯಮ ಇಲಾಖೆಯಿಂದ ಗುರುತಿಸಿರುವ ಪ್ರವಾಸಿ ತಾಣಗಳ ಪೈಕಿ ಪ್ರಮುಖ ಪ್ರವಾಸಿ ತಾಣಗಳ ವಿವರಗಳನ್ನು ಪ್ರವಾಸೋದ್ಯಮ ಇಲಾಖಾ ಅಂತರ್ಜಾಲ www.karnatakatourism.org ರಲ್ಲಿ ಅಳವಡಿಸಲಾಗಿದೆ.
ಉಡುಪಿ ಜಿಲ್ಲೆಯಲ್ಲಿ ಪ್ರವಾಸೋದ್ಯಮ ಇಲಾಖೆಯಿಂದ ಗುರುತಿಸಿರುವ ಪ್ರವಾಸಿ ತಾಣಗಳ ಪೈಕಿ ಪ್ರಮುಖ ಪ್ರವಾಸಿ ತಾಣಗಳ ವಿವರಗಳನ್ನು www.udupitourism.com ಮತ್ತು http://udupi.nic.in ನಲ್ಲಿ ಅಳವಡಿಸಲಾಗಿದೆ.
ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರವಾಸೋದ್ಯಮ ಇಲಾಖೆಯಿಂದ ಗುರುತಿಸಿರುವ ಪ್ರವಾಸಿ ತಾಣಗಳ ಪೈಕಿ ಪ್ರಮುಖ ಪ್ರವಾಸಿ ತಾಣಗಳ ಮಾಹಿತಿಯನ್ನು ಜಿಲ್ಲಾ ಮಟ್ಟದ ಅಂತರ್ಜಾಲ http://dk.nic.in ರಲ್ಲಿ ಹಾಗೂ Q.R.Code ನ್ನು ಅಭಿವೃದ್ಧಿಪಡಿಸಿ ವೆಬ್‌ಸೈಟ್‌ನಲ್ಲಿ ಅಳವಡಿಸಲಾಗಿದೆ.
ಪ್ರವಾಸೋದ್ಯಮ ಇಲಾಖೆಯಿಂದ ಕರಾವಳಿ ಸರ್ಕ್ಯೂಟ್ ಸಂಬಂಧ ಕಿರುಹೊತ್ತಿಗೆಯನ್ನು (ಬ್ರೋಚರ್ಸ್) ಸಿದ್ಧಪಡಿಸಲಾಗಿದೆ.
</td>
</tr>
<tr>
<td>ಆ)</td>
<td>ಪಶ್ಚಿಮ ಘಟ್ಟದಿಂದ ಹರಿಯುವ ನದಿಗಳು, ಜಲಪಾತಗಳು, ಕಡಲ ತೀರ, ಧಾರ್ಮಿಕ ಕ್ಷೇತ್ರಗಳನ್ನು ಹೊಂದಿರುವ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ಪ್ರವಾಸಿ ತಾಣಗಳ ಅಭಿವೃದ್ಧಿಗೆ "ಟೂರಿಸಂ ಹಬ್" ಆಗಿಸಲು ಮಾಸ್ಟರ್ ಪ್ಲಾನ್ ತಯಾರಿಸಲಾಗಿದೆಯೇ; ಹಾಗಿದ್ದಲ್ಲಿ, ಅದರ ಪ್ರತಿಯನ್ನು ಒದಗಿಸುವುದು.</td>
<td>
ಪಶ್ಚಿಮ ಘಟ್ಟದಿಂದ ಹರಿಯುವ ನದಿಗಳು, ಜಲಪಾತಗಳು, ಕಡಲ ತೀರ, ಧಾರ್ಮಿಕ ಕ್ಷೇತ್ರಗಳನ್ನು ಹೊಂದಿರುವ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ಪ್ರವಾಸಿ ತಾಣಗಳ ಅಭಿವೃದ್ಧಿಗೆ "ಟೂರಿಸಂ ಹಬ್" ಆಗಿಸಲು ಮಾಸ್ಟರ್ ಪ್ಲಾನ್ ಅಂತಿಮಗೊಳಿಸಲಾಗಿರುವುದಿಲ್ಲ.
ಆದರೆ, ಈ ಸಂಬಂಧ ಇಲಾಖೆಯು ಕಾರ್ಯೋನ್ಮುಖವಾಗಿದ್ದು, ಕರ್ನಾಟಕ ಪ್ರವಾಸೋದ್ಯಮ ನೀತಿ 2020-25ರ ಅಡಿ ರಾಜ್ಯದ ಜಿಲ್ಲೆಗಳ ವ್ಯಾಪ್ತಿಯಲ್ಲಿರುವ ಕೇಂದ್ರೀಕೃತ ಪ್ರವಾಸಿ ತಾಣಗಳು (Focus Tourism Destiation) ಹಾಗೂ ಇತರೆ ಎಲ್ಲಾ ಪ್ರವಾಸಿ ತಾಣಗಳನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಲು ಕೈಗೊಳ್ಳಬಹುದಾದ ಪ್ರವಾಸಿ ಮೂಲಸೌಲಭ್ಯ ಯೋಜನೆಗಳು, ಇಲಾಖೆಯ ಜಮೀನು/ ನಿವೇಶನಗಳ ವಿವರ, ಪ್ರಚಾರ ಕಾರ್ಯಕ್ರಮಗಳು, ಸಂಪರ್ಕ ರಸ್ತೆ, ಪಿಪಿಪಿ ಯೋಜನೆಗಳು ಬೃಹತ್ ಪ್ರವಾಸಿ ಯೋಜನೆಗಳು, ಜಿಲ್ಲಾಡಳಿತದಿಂದ ಪ್ರವಾಸೋದ್ಯಮ ಅಭಿವೃದ್ಧಿಗೆ ಮೀಸಲಿಡಲು ಇಚ್ಛಿಸುವ ಜಮೀನುಗಳ ವಿವರ ಮತ್ತು ಇತರೆ ಕಾಮಗಾರಿಗಳುಳ್ಳ ಸಮಗ್ರ ಪ್ರವಾಸೋದ್ಯಮ ಅಭಿವೃದ್ಧಿ ಯೋಜನಾ ವರದಿ (Comprehensive Tourism Development Plan) ಯನ್ನು ಸಿದ್ಧಪಡಿಸಿ ಜಿಲ್ಲಾಧಿಕಾರಿಗಳ ಶಿಫಾರಸ್ಸಿನೊಂದಿಗೆ ಸಲ್ಲಿಸುವಂತೆ ಇಲಾಖೆಯ ಉಪ/ಸಹಾಯಕ ನಿರ್ದೇಶಕರುಗಳಿಗೆ ದಿನಾಂಕ: 29-11-2021 ಮತ್ತು 27-12-2021ರ ಪತ್ರಗಳಲ್ಲಿ ತಿಳಿಸಲಾಗಿರುತ್ತದೆ.
ಅದರಂತೆ, ದಕ್ಷಿಣ ಕನ್ನಡ ಜಿಲ್ಲೆ ರವರ ಸಮಗ್ರ ಪ್ರವಾಸೋದ್ಯಮ ಅಭಿವೃದ್ಧಿ ಯೋಜನಾ ವರದಿಯನ್ನು ದಿನಾಂಕ: 24-01-2022ರಂದು ಇಲಾಖೆಗೆ ಸಲ್ಲಿಸಿದ್ದು, ಸದರಿ ವರದಿಯನ್ನು ಪರಿಶೀಲಿಸಲಾಗುತ್ತಿದೆ.
ಉಡುಪಿ ಜಿಲ್ಲೆಯಿಂದ ಸಮಗ್ರ ಪ್ರವಾಸೋದ್ಯಮ ಅಭಿವೃದ್ಧಿ ಯೋಜನಾ ವರದಿ ನಿರೀಕ್ಷಿಸಲಾಗುತ್ತಿದೆ.
ಮುಂದುವರೆದು, ಉಡುಪಿ ಜಿಲ್ಲೆ, ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗಳ ಕಡಲ ತೀರಗಳಲ್ಲಿ ಪ್ರವಾಸೋದ್ಯಮ ಮೂಲಸೌಲಭ್ಯ ಅಭಿವೃದ್ಧಿಗಾಗಿ ಮೆ: ಐ.ಪಿ.ಇ. ಗ್ಲೋಬಲ್, ನವದೆಹಲಿ ಸಮಾಲೋಚಕರಿಂದ ಕೋಸ್ಟಲ್ ಮಾಸ್ಟರ್ ಪ್ಲ್ಯಾನ್ ಸಿದ್ಧಪಡಿಸಿಕೊಳ್ಳಲಾಗಿದೆ.
</td>
</tr>
</table>

| | | |
|---|---|---|
| | | ಈ ಮಾಸ್ಟರ್ ಪ್ಲ್ಯಾನ್ ಹಾಗೂ ಕೇಂದ್ರ ಸರ್ಕಾರವು ಹೊರಡಿಸಿರುವ ಕರಡು ಕರಾವಳಿ ನಿಯಂತ್ರಣ ವಲಯದ ಅಧಿಸೂಚನೆ-2019 ರನ್ವಯ ಹಾಗೂ ಅಂತಿಮವಾಗಿ ಪ್ರಕಟಿಸಲಿರುವ ಕರಾವಳಿ ನಿಯಂತ್ರಣ ವಲಯದ ಅಧಿಸೂಚನೆಯನ್ನು ಗಮನದಲ್ಲಿಟ್ಟುಕೊಂಡು ರಾಜ್ಯದ ಕರಾವಳಿ ಜಿಲ್ಲೆಗಳಾದ ಉಡುಪಿ, ಉತ್ತರ ಕನ್ನಡ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಪ್ರವಾಸೋದ್ಯಮ ಇಲಾಖೆಯಿಂದ ಕೈಗೊಳ್ಳಬಹುದಾದ ಪ್ರವಾಸಿ ಸೌಲಭ್ಯ ಹಾಗೂ ಇತರ ಯೋಜನೆಗಳಿಗೆ ಸಂಬಂಧಿಸಿದಂತೆ **ಸಮಗ್ರ ಪ್ರವಾಸೋದ್ಯಮ ಅಭಿವೃದ್ಧಿ ಯೋಜನಾ ವರದಿಯನ್ನು ಸಿದ್ಧಪಡಿಸಿ ಸಲ್ಲಿಸುವಂತೆ Dean, College of Fisheries, Mangaluru ರವರಿಗೆ ದಿನಾಂಕ:16-12-2021ರಂದು ಕಾರ್ಯಾದೇಶವನ್ನು ನೀಡಲಾಗಿದ್ದು, ವರದಿ ನಿರೀಕ್ಷಿಸಲಾಗುತ್ತಿದೆ.** |
| ಇ) | ಸದರಿ ಜಿಲ್ಲೆಗಳಲ್ಲಿ ನೈಸರ್ಗಿಕ ಪ್ರವಾಸಿ ತಾಣ ಮತ್ತು ಧಾರ್ಮಿಕ ಕ್ಷೇತ್ರಗಳಿಗೆ ಸಂಪರ್ಕ ಸಾಧಿಸುವ ನಿಟ್ಟಿನಲ್ಲಿ ಟೂರಿಸಂ ರೂಟ್ ಮ್ಯಾಪ್‌ನ್ನು ತಯಾರಿಸಲಾಗಿದೆಯೇ; ಇಲ್ಲವಾದಲ್ಲಿ, ತಯಾರಿಕೆಗೆ ಇರುವ ತೊಂದರೆಯೇನು; | ಪ್ರವಾಸೋದ್ಯಮ ಇಲಾಖೆಯಿಂದ ಕರ್ನಾಟಕ ಪ್ರವಾಸಿ ತಾಣಗಳ ಸಂಪರ್ಕ ಮಾಹಿತಿಗಾಗಿ ರೂಟ್ ಮ್ಯಾಪ್ ತಯಾರಿಸಲಾಗಿದೆ. ಸದರಿ ರೂಟ್ ಮ್ಯಾಪ್ ಅನ್ನು ಪ್ರವಾಸೋದ್ಯಮ ಇಲಾಖಾ ಅಂತರ್ಜಾಲ www.karnatakatourism.org ರಲ್ಲಿ ಅಳವಡಿಸಲಾಗಿದೆ.<br>ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರವಾಸೋದ್ಯಮ ಇಲಾಖೆಯಿಂದ ಗುರುತಿಸಿರುವ ಪ್ರವಾಸಿ ತಾಣಗಳ ಪೈಕಿ ಪ್ರಮುಖ ಪ್ರವಾಸಿ ತಾಣಗಳ ಮಾಹಿತಿಯನ್ನು ಜಿಲ್ಲಾ ಮಟ್ಟದ ಅಂತರ್ಜಾಲ http://dk.nic.in ರಲ್ಲಿ ಹಾಗೂ Q.R.Code ಅನ್ನು ಅಭಿವೃದ್ಧಿಪಡಿಸಿ ವೆಬ್‌ಸೈಟ್‌ನಲ್ಲಿ ಅಳವಡಿಸಲಾಗಿದೆ.<br>ಉಡುಪಿ ಜಿಲ್ಲೆಯಲ್ಲಿ ಪ್ರವಾಸೋದ್ಯಮ ಇಲಾಖೆಯಿಂದ ಗುರುತಿಸಿರುವ ಪ್ರವಾಸಿ ತಾಣಗಳ ಪೈಕಿ ಪ್ರಮುಖ ಪ್ರವಾಸಿ ತಾಣಗಳ ವಿವರಗಳನ್ನು www.udupitourism.com ಮತ್ತು http://udupi.nic.in ನಲ್ಲಿ ಅಳವಡಿಸಲಾಗಿದೆ. |
| ಈ) | ಟೂರಿಸಂ ರೂಟ್ ಮ್ಯಾಪ್ ನಿಂದ ಪ್ರವಾಸಿಗರಿಗೆ ಈ ತಾಣಗಳಿಗೆ ಭೇಟಿ ನೀಡಲು ಸಮಯದ ಉಳಿತಾಯವಾಗುವುದರ ಜೊತೆಗೆ ಆದಾಯ ಹೆಚ್ಚಳವಾಗುವುದನ್ನು ಸರಕಾರ ಗಮನಿಸಿದೆಯೇ; | ಹೌದು. |

**TOR 78 TDV 2022**

(ಆನಂದ್ ಸಿಂಗ್)
ಪ್ರವಾಸೋದ್ಯಮ,
ಜೀವಿಶಾಸ್ತ್ರ, ಮತ್ತು ಪರಿಸರ ಸಚಿವರು.